# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಕೋರಮಂಗಲ ಉಪ-ವಿಭಾಗದ, ಈಜೀಪುರ ವಾರ್ಡ್ ಸಂಖ್ಯೆ-148 ದಿನಾಂಕ:07-08-2021 ರಂದು**
**ಆಗಸ್ಟ್-2021 ರ ವಾರ್ಡ್ ಸಮಿತಿಯ ಮಾಸಿಕ ಸಭೆಯ ನಡವಳಿಗಳು**

ಡಾ॥ ಅಶೋಕ್ ಡಿ.ಆರ್, ಜಂಟಿ ಆಯುಕ್ತರು (ಯಲಹಂಕ) ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 148ರ ರವರ ಅಧ್ಯಕ್ಷತೆಯಲ್ಲಿ ಬಿ.ಬಿ.ಎಂ.ಪಿ ಕಛೇರಿ, **Hot mix plant, 80 feet road,** ಈಜೀಪುರ, ಬೆಂಗಳೂರು ರಲ್ಲಿ ದಿನಾಂಕ:06.03.2021 ರಂದು ಬೆಳಗ್ಗೆ 11.30 ಗಂಟೆಗೆ ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡವಳಿಗಳು:

**ಹಾಜರಿದ್ದವರು:-**

1. ಶ್ರೀ ದೊರೈ
2. ಕುಮಾರಿ ಕಲೈ ಸೆಲ್ವಿ .ಡಿ
3. ಶ್ರೀ ಎಂ.ಎಸ್. ಗಣೇಶ್
4. ಶ್ರೀ ಲಕ್ಷ್ಮೀಪತಿ
5. ಶ್ರೀ ಶ್ರೀ ರಾಜೇಂದ್ರ ಬಾಬು

**ಹಾಜರಿದ್ದ ಅಧಿಕಾರಿಗಳು:-**

1. ಶ್ರೀ ಪ್ರದೀಪ್ ಕುಮಾರ್, ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು, ವಾರ್ಡ್-148 ಈಜೀಪುರ
2. ಶ್ರೀ ಎ. ಕುಮಾರವೇಲು, ಹಿರಿಯ ಆರೋಗ್ಯ ನಿರೀಕ್ಷಕರು
3. ಶ್ರೀ ಟಿ.ಎಸ್. ಮುತ್ತುರಾಜ, ಕಿರಿಯ ಆರೋಗ್ಯ ನಿರೀಕ್ಷಕರು
4. ಶ್ರೀ ಯಶವಂತ್ ಹೆಚ್.ಜಿ.

* * * * *

ಶ್ರೀ ಕಿರಣ್ ಕುಮಾರ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ಯೋಜನೆ (ಯಲಹಂಕ) ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 148 ರವರು ಸಭೆಗೆ ಹಾಜರಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರುಗಳನ್ನು ಹಾಗೂ ವಾರ್ಡ್‌ಗೆ ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು ಮತ್ತು ಸಭೆಯಲ್ಲಿ ವಾರ್ಡ್‌ಗೆ ಸಂಬಂಧಪಟ್ಟ ಕುಂದುಕೊರತೆಗಳನ್ನು ಚರ್ಚಿಸುವಂತೆ ತಿಳಿಸಿದರು.

ವಾರ್ಡ್ ವ್ಯಾಪ್ತಿಯಲ್ಲಿ ಒಣಕಸ ಸಂಗ್ರಹಣ ಕೇಂದ್ರ ಪ್ರಸ್ತುತ ಇಲ್ಲದಿದ್ದ ಕಾರಣ, ಒಣಕಸ ಸಂಗ್ರಹಣ ಕೇಂದ್ರವನ್ನು ತೆರೆಯಲು ಸಮರ್ಥನ ಸಂಸ್ಥೆ ಅಥವಾ ಹಾಲಿ ಕಸ ಸಂಗ್ರಹಣ ಗುತ್ತಿಗೆದಾರರಾದ ಶ್ರೀ ವೆಂಕಟೇಶ್ ರವರಿಂದ ಕಾಮಗಾರಿಯನ್ನು ಕೈಗೆತ್ತಿಗೊಳ್ಳಲು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ ವಿಭಾಗ ರವರಿಗೆ ಪತ್ರ ಬರೆಯಲು ವಾರ್ಡ್ ಸಮಿತಿಯಿಂದ ನಿರ್ಣಯಿಸಲಾಯಿತು.

**ಕ್ರಮ: ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು,**
**ಘನತ್ಯಾಜ್ಯ ನಿರ್ವಹಣೆ ವಿಭಾಗ**

ವಾರ್ಡ್ ವ್ಯಾಪ್ತಿಯ ಒಣಕಸವನ್ನು ಬುಧವಾರ ಮತ್ತು ಶನಿವಾರಗಳಂದು ತೆಗೆಯಲು ವಾರದ ಉಳಿದ ದಿನಗಳಲ್ಲಿ ಹಸಿಕಸವನ್ನು ಸಂಗ್ರಹಿಸುವ ಬಗ್ಗೆ ಸಮರ್ಪಕ ಜಾಹೀರಾತು ಪ್ರದರ್ಶಿಸಿ, ಸೂಕ್ತ ಜಾಹೀರಾತು ನೀಡಲು ಕ್ರಮವಹಿಸಲು ನಿರ್ಣಯತೆಗೆದುಕೊಳ್ಳಲಾಯಿತು.

**ಕ್ರಮ: ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು,**
**ಘನತ್ಯಾಜ್ಯ ನಿರ್ವಹಣೆ ವಿಭಾಗ**



Scanned by CamScanner

ವಾರ್ಡ್ ವ್ಯಾಪ್ತಿಯಲ್ಲಿ ಕೈಗೊಳ್ಳುವ ಕಾಮಗಾರಿಗಳ Action Plan ಸಿದ್ಧಪಡಿಸಿ, ಅನುಮೋದನೆ ಪಡೆದು ಜಾಬ್‌ಕೋಡ್ ಪಡೆಯುವಂತೆ ತುರ್ತಾಗಿ ವಾರ್ಡ್ ಸಮಿತಿ ನಿರ್ಣಯಿಸಲಾಯಿತು.

ಕ್ರಮ: ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು,
ಕೋರಮಂಗಲ ಉಪವಿಭಾಗ

ವಾರ್ಡ್ ವ್ಯಾಪ್ತಿಯ ವೈಯ್ಯಪ್ಪ ಬಡಾವಣೆಯ 27ನೇ ಅಡ್ಡರಸ್ತೆ, 2ನೇ ಅಡ್ಡರಸ್ತೆ ಬಳಿ ಇರುವ ಡೆಬ್ರಿಸ್ ತ್ಯಾಜ್ಯವನ್ನು ತೆರವುಗೊಳಿಸುವಂತೆ ಸೂಚಿಸಲಾಯಿತು.

ಕ್ರಮ: ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು,
ಕೋರಮಂಗಲ ಉಪವಿಭಾಗ

ಶ್ರೀರಾಮ ಮುಖ್ಯರಸ್ತೆಯ 20ನೇ 'ಸಿ' ಅಡ್ಡರಸ್ತೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಒಳಚರಂಡಿ ಮಾರ್ಗವನ್ನು ಹಾಕಲಾಗಿತ್ತು, ತೆರವುಗೊಳಿಸದೆ ಅದರ ಮೇಲೆಯೇ ಮತ್ತೊಂದು ಮಾರ್ಗವನ್ನು ಹಾಕಿರುವುದರಿಂದ ಜನರಿಗೆ ಈ ಬಗ್ಗೆ ಗೊಂದಲ ಉಂಟಾಗುತ್ತಿರುವುದು ಇದನ್ನು ಸರಿಪಡಿಸಲು ಸಹಾಯಕ ಕಾರ್ಯಪಾಲಕ ಅಭಿಯಂತರರು (ಕೋರಮಂಗಲ ಉಪವಿಭಾಗ) ರವರಿಗೆ ತಿಳಿಸಿದರು.

ಕ್ರಮ: ಕಾರ್ಯಪಾಲಕ ಅಭಿಯಂತರರು,
ಬಿ.ಡಬ್ಲ್ಯೂ.ಎಸ್.ಎಸ್.ಬಿ., ಡಬ್ಲ್ಯೂ.ಎಂ.ಎಂ.

ಅಶ್ವಿನಿ ಲೇಔಟ್ ಬಡಾವಣೆಯ ಒಳ ಚರಂಡಿಗಳು ಮಳೆ ಬಂದ ಸಂದರ್ಭದಲ್ಲಿ ಪರ್ಟ್‌ವೆಲ್‌ನ ಅಸಮರ್ಪಕ ನಿರ್ವಹಣೆಯಿಂದ ಒಳಚರಂಡಿ ಉಕ್ಕಿ ಹರಿಯುವುದರಿಂದ ಸಾರ್ವಜನಿಕರಿಗೆ ತೊಂದರೆ ಆಗುವುದರಿಂದ ಈ ಬಗ್ಗೆ ಕ್ರಮವಹಿಸಲು ವಾರ್ಡ್ ಸಮಿತಿಯಿಂದ ಸೂಚಿಸಲಾಗಿದೆ.

ಕ್ರಮ: ಕಾರ್ಯಪಾಲಕ ಅಭಿಯಂತರರು,
ಬಿ.ಡಬ್ಲ್ಯೂ.ಎಸ್.ಎಸ್.ಬಿ.

ವಾರ್ಡ್ ವ್ಯಾಪ್ತಿಯ ಕೇಂದ್ರ/ ರಾಜ್ಯ ಸಹಕಾರಿಗಳ ಖಾಲಿ ನಿವೇಶನ ಗುರುತು ಮಾಡಿ, ವರದಿ ನೀಡಲು ಈ ಹಿಂದೆ ಕಂದಾಯ ಅಧಿಕಾರಿಗಳು ಈ ಬಗ್ಗೆ ತೆಗೆದುಕೊಂಡ ಕ್ರಮದ ಬಗ್ಗೆ ವರದಿ ನೀಡುವಂತೆ ಸೂಚಿಸಲಾಯಿತು.

ವಾರ್ಡ್ ವ್ಯಾಪ್ತಿಯ ಮನೆಗಳಿಗೆ ವೈಜ್ಞಾನಿಕ ರೀತಿಯಲ್ಲಿ ನಂಬರ್‌ಗಳಲ್ಲಿ ವಿತರಿಸಲು ಕ್ರಮ ನಿರ್ವಹಿಸಲು ಸಹಾಯಕ ಕಂದಾಯ ಅಧಿಕಾರಿಗಳು, ಕೋರಮಂಗಲ ರವರಿಗೆ ಸೂಚಿಸಲಾಯಿತು.

ಕ್ರಮ: ಸಹಾಯಕ ಕಂದಾಯ ಅಧಿಕಾರಿಗಳು,
ಕೋರಮಂಗಲ ಉಪವಿಭಾಗ

ಕೊನೆಯದಾಗಿ, ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ಸಭೆಗೆ ಹಾಜರಾಗಿದ್ದ ಎಲ್ಲಾ ಸದಸ್ಯರು ಹಾಗೂ ಅಧಿಕಾರಿಗಳಿಗೆ ವಂದನೆಯನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ಅನುಷ್ಠಾನ ವರದಿಯೊಂದಿಗೆ ಮುಂದಿನ ಸಭೆಗೆ ಹಾಜರಾಗಿ ಮಾಹಿತಿ ಒದಗಿಸಲು ಸಭೆಯಲ್ಲಿ ಹಾಜರಾಗಿದ್ದ ಎಲ್ಲಾ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| (ಪ್ರದೀಪ್ ಕುಮಾರ್ .ಆರ್) | (ಡಾ॥ [illegible] ಡಿ.ಆರ್) |
| ಸದಸ್ಯ ಕಾರ್ಯದರ್ಶಿ | ನೋಡಲ್ ಅಧಿಕಾರಿಗಳು |
| ಹಾಗೂ ಸಹಾಯಕ ಅಭಿಯಂತರರು, | ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು |
| ವಾರ್ಡ್-148 ಈಜೀಪುರ | ವಾರ್ಡ್-148 ಈಜೀಪುರ |



Scanned by CamScanner



Scanned by CamScanner



Scanned by CamScanner